ಅವರು ಕೇಳುವ ಅಧಿಕಾರವನ್ನು ಬೇರೆಯವರಿಗೆ ಕೊಟ್ಟಿದ್ದರು. ಅದೇ ರೀತಿ ಅಶೋಕ್ ಎಸ್. ಕಾಟವೇ ಅವರು ಬಾರದೇ ಇದ್ದಾಗ, ಪ್ರಶ್ನೆ ಕೇಳುವ ಅಧಿಕಾರವನ್ನು ಬೇರೆಯವರಿಗೆ ವಹಿಸಬೇಕಾಗಿತ್ತು. ಆಮೇಲೆ ಮಾನ್ಯ ಕೃಷ್ಣಪ್ಪನವರ ಪ್ರಶ್ನೆಯನ್ನೂ ಮುಂದಕ್ಕೆ ಹಾಕಲಾಗಿದೆ. ಏಕೆಂದರೆ ಉತ್ತರ ಬಂದಿರುವುದಿಲ್ಲ.

ಎಂ.ಆರ್.ಪಿ.ಎಲ್. ಸಂಸ್ಥೆ ಬೈಕಂಪಾಡಿಯಿಂದ ಮಂಗಳೂರು ನಗರಾಭಿವೃದ್ಧಿ ಸಂಸ್ಥೆಗೆ ಬಾಕಿಯಿರುವ ಹಣ

422 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಂ.ಆರ್.ಪಿ.ಎಲ್. ಸಂಸ್ಥೆ ಬೈಕಂಪಾಡಿಯಿಂದ ಮಂಗಳೂರು ನಗರಾಭಿವೃದ್ಧಿ ಸಂಸ್ಥೆಗೆ ಬಾಕಿ ಇರುವ ಹಣ ಎಷ್ಟು? ಅದರಲ್ಲಿ ಬೆಟರ್ ಮೆಂಟ್ ಲೆವಿ ಎಷ್ಟು, ವಾಟರ್ ಅಗ್ಮೆಂಟೇಷನ್ ಚಾರ್ಜ್ ಎಷ್ಟು?

ಆ) ರಾಜ್ಯ ಸರ್ಕಾರ ಮೇಲಿನ ಸಂಸ್ಥೆಯಿಂದ ಬಾಕಿ ಇರುವ ಹಣವನ್ನು ಕೂಡಲೇ ಸಂಗ್ರಹಿಸಿ ಮಂಗಳೂರಿನ ಸಮಗ್ರ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸಲು, ಒಳಚರಂಡಿ ಯೋಜನೆ ಸುಸ್ಥಿತಿಗೆ ತರಲು ಹಾಗೂ ಮಂಗಳೂರಿನ ಮಾರ್ಗಗಳ ದುರಸ್ತಿಗೆ ಉಪಯೋಗಿಸಿಕೊಳ್ಳಲಾಗುವುದೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಎಂ.ಆರ್.ಪಿ.ಎಲ್. ಸಂಸ್ಥೆಯು ಮಂಗಳೂರು ಪ್ರಾಧಿಕಾರಕ್ಕೆ ಪಾವತಿಸಬೇಕಾದ ಅಂದಾಜು ಮೊತ್ತ ರೂ. 18.16 ಕೋಟಿಗಳು ವಿವರ ಕೆಳಕಂಡಂತೆ ಇದೆ.

ಅ) ಬೆಟರ್ ಮೆಂಟ್ ಶುಲ್ಕ ರೂ. 4.61 ಕೋಟಿಗಳು

ಆ) ಜಲ ಸಂಪನ್ಮೂಲ ಕ್ರೋಡೀಕರಣ ಶುಲ್ಕ ರೂ. 13.55 ಕೋಟಿಗಳು.

ಆ) ಸದರಿ ಕಂಪೆನಿಯು ಮಂಗಳೂರಿನ ಕೊತ್ತನೂರು ಬಾಳ ಮತ್ತು ತೋಕೂರು ಗ್ರಾಮಗಳಲ್ಲಿನ 1335.13 ಎಕರೆ ಜಮೀನನ್ನು ಕೈಗಾರೀಕರಣಕ್ಕಾಗಿ ಅಭಿವೃದ್ಧಿ ಪಡಿಸಲು ಯೋಜಿಸಿದ್ದಾರೆ. ಸರ್ಕಾರ ಈಗಿದ್ದಂತೆ 67.05 ಎಕರೆ ವಿಸ್ತೀರ್ಣವನ್ನು ವ್ಯವಸಾಯ ವಲಯದಿಂದ ಕೈಗಾರಿಕಾ ವಲಯಕ್ಕೆ ಭೂ ಬದಲಾವಣೆ ಅನುಮೋದನೆ ನೀಡಿದೆ. ಕಂಪೆನಿ ಮಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತೆರಬೇಕಾದ ಅಭಿವೃದ್ಧಿ ಶುಲ್ಕವನ್ನು ಮನ್ನಾ ಮಾಡುವಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೇ, ಒಬ್ಬ ಬಡ ನಾಗರೀಕ ಯಾವುದೇ ಬೆಟರ್‌ಮೆಂಟ್ ಲೆವಿ ಕಟ್ಟದೇ ಅಥವಾ ಸಂಬಂಧಪಟ್ಟ ಸರ್ಟಿಫಿಕೇಟ್ ಸಿಕ್ಕದೇ, ಮನೆ ಕಟ್ಟಲು ಲೈಸೆನ್ಸ್ ಸಿಕ್ಕುವುದಿಲ್ಲ, ಅವನು ಮನೆ ಕಟ್ಟುವುದಕ್ಕೆ ಸಾಧ್ಯವಿಲ್ಲ ಇಂತಹ ಪ್ರಸಂಗದಲ್ಲಿ, ಮಂಗಳೂರಿನ ಹತ್ತಿರವಿರುವ ಬೈಕಂಪಾಡಿಯಲ್ಲಿ, ಎಂ.ಆರ್.ಪಿ.ಎಲ್. ಎಂಬ ಸಂಸ್ಥೆಯವರು 4 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ, ಅತ್ಯಂತ ದೊಡ್ಡ ಕಟ್ಟಡವನ್ನು ಕಟ್ಟುವುದಕ್ಕೆ ಯಾವುದೇ ಬೆಟರ್‌ಮೆಂಟ್‌ಲೆವಿಯನ್ನು ಕಟ್ಟದೇ ಹೊರಟಿದ್ದಾರೆ. ಸುಮಾರು 18 ಕೋಟಿ 16 ಲಕ್ಷ ರೂಪಾಯಿಗಳ ಬೆಟರ್ ಮೆಂಟ್‌ಲೆವಿಯನ್ನು ಕಟ್ಟದೇ ಕಟ್ಟಡದ ರಚನೆ ಮಾಡುತ್ತಿದ್ದಾರೆ. ಹಾಗಾದರೆ, ಕಳೆದ ಒಂದು ವರ್ಷದಿಂದ ಸರ್ಕಾರ ಇದರ ಬಗ್ಗೆ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ನಾವು ಇದರ ಬಗ್ಗೆ ಮನ್ನಾ ಮಾಡಬೇಕೆಂದು ಬರೆದಿದ್ದಾರೆಂದು ಹೇಳಿದರೂ ಕೂಡ, ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ, ಇದು ಎಂತಹ ನಾಚಿಕೆಗೇಡಿನ ಸಂಗತಿ. ನನಗೆ ಸರ್ಕಾರದ ಕಡೆಯಿಂದ ಸ್ಪಷ್ಟೀಕರಣ ಕೊಡಬೇಕು. ಈ ಹಣವನ್ನು

ಯಾವಾಗ ವಸೂಲಾತಿ ಮಾಡುತ್ತೀರಿ, ಇಲ್ಲದೇ ಹೋದರೆ, ಸರ್ಕಾರ ಇದರಲ್ಲಿ ಶಾಮೀಲಾಗಿದೆ ಎಂದು ತಿಳಿದುಕೊಳ್ಳಬಹುದೇ? ಸರ್ಕಾರ ಇದರ ಬಗ್ಗೆ ವಸೂಲಾತಿ ಮಾತನಾಡುತ್ತಿರುವುದು ಮತ್ತು ಈ ರೀತಿ ವಸೂಲಾತಿಯಾದ ಹಣವನ್ನು ಸಮಗ್ರವಾಗಿ ನೀರು ಸರಬರಾಜು ಯೋಜನೆಗೆ ವಿನಿಯೋಗಿಸುವುದಕ್ಕೆ ಸಾಧ್ಯವುಂಟೇ? ಇದರ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಕೊಡಬೇಕು.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸಭಾಧ್ಯಕ್ಷರೇ, ಮಂಗಳೂರು ಬಳಿಯ ಬೈಕಂಪಾಡಿಯಲ್ಲಿ ಎಂ.ಆರ್.ಪಿ.ಎಲ್. ಸಂಸ್ಥೆ ಮತ್ತು ಬಿರ್ಲಾರವರವತಿಯಿಂದ 4 ಸಾವಿರದ 61 ಕೋಟಿ ರೂ.ಗಳು ಕಂಪೆನಿ ಕಟ್ಟಡ ಬರುತ್ತಿದೆ. ಅದರ ಸಂಬಂಧವಾಗಿ ಡೆವಲಪ್‌ಮೆಂಟ್ ಅಥಾರಿಟಿಗೆ 18 ಕೋಟಿ 16 ಲಕ್ಷ ಬರಬೇಕು. ಇದು ಬಂದರೆ, ಮಂಗಳೂರಿನ ಅಭಿವೃದ್ಧಿ ಕೆಲಸಗಳು ಆಗಬಹುದು. ಮತ್ತೊಂದು ಕಡೆ, ಈ ಕಂಪೆನಿ ಏನು ಬರುತ್ತಿದೆ, ಇದಕ್ಕೆ ರಿಯಾಯಿತಿ ಕೊಡಬೇಕೆಂದು ಕೂಡ, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ನಿಂದ ಮತ್ತು ಬೇರೆ ಬೇರೆ ಕಡೆಯಿಂದ ಕೇಳಿಕೊಳ್ಳುತ್ತಿದ್ದಾರೆ. ಆ ದೃಷ್ಟಿಯಿಂದ ಈ ಹಣ ಬಂತು ಎಂದರೆ, ಮಂಗಳೂರು ಸಿಟಿಗೆ ಉಪಯೋಗವಾಗಬಹುದು, ಹೆಚ್ಚಿನ ರೀತಿಯ ಲಾಭವಾಗಬಹುದು. ಇದರ ಬಗ್ಗೆ ಸರ್ಕಾರ ಅವರಿಗೆ ವಿನಾಯಿತಿ ಕೊಡಬಹುದೇ ಅಥವಾ ಬೇಡವೇ ಎನ್ನುವ ಬಗ್ಗೆ ನಮ್ಮ ಸರ್ಕಾರ ಯಾವುದೇ ನಿರ್ಣಯಕ್ಕೆ ಇನ್ನೂ ಬಂದಿಲ್ಲ.

ಶ್ರೀ ಎನ್. ಯೋಗೀಶ್ ಭಟ್ : 4 ಸಾವಿರ ಕೋಟಿ ಬಂಡವಾಳ ಹಾಕತಕ್ಕ ಒಂದು ಸಂಸ್ಥೆ, 18 ಕೋಟಿ, 16 ಲಕ್ಷ ಅಂದರೆ, ಕಿಂಚಿತ್ 4 ಪರ್ಸೆಂಟ್ ಬರಬಹುದು. ಇಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಾದರೆ, ಇದಕ್ಕೆ ಅನುಮತಿಯನ್ನು ಕೊಡತಕ್ಕ ಸರ್ಕಾರ ಯೋಚಿಸುತ್ತಿದೆಯೆಂದು ಹೇಳಿದರೆ, ಹೇಗೆ? ಇದರ ಬಗ್ಗೆ ಸ್ಪಷ್ಟ ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ನಾವು ಇದನ್ನು ಸಂಗ್ರಹ ಮಾಡುತ್ತೇವೆ, ಕಲೆಕ್ಷನ್ ಮಾಡುತ್ತೇವೆ ಎಂಬ ದೃಢ ನಿರ್ಧಾರವನ್ನು ಮಾನ್ಯ ಮಂತ್ರಿಗಳು ಕೊಡುವುದಕ್ಕೆ ಏಕೆ ಸಾಧ್ಯವಾಗುತ್ತಾ ಇಲ್ಲವೆಂದು ಕೇಳುತ್ತಿದ್ದೇನೆ.

ಶ್ರೀ ವೈಜನಾಥ್ ಪಾಟೀಲ್ : ಇದರ ಬಗ್ಗೆ ಸರ್ಕಾರ ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳುತ್ತದೆ.

12.10 ಪಿ.ಎಂ.

ಶ್ರೀ ಎನ್. ಯೋಗಿಶ್ ಭಟ್ : ಉದಾಹರಣೆಗೆ ಹೇಳುವುದಿದ್ದರೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ನೀರಿನ ಸಮಸ್ಯೆ ವಿಪರೀತವಾಗಿ ಇದೆ, ಇಂತಹ ಸಂದರ್ಭದಲ್ಲಿ ತಾವೇ ನೇತ್ರಾವತಿ ನದಿಗೆ ಅಡ್ಡಗಟ್ಟಿ ಕೊಳವೆಗಳಿಂದ ನೀರನ್ನು ತರಿಸತಕ್ಕಂಥ ಒಂದು ಯೋಜನೆಯನ್ನು ಕೂಡ ಅವರೇ ಹಾಕುತ್ತಿದ್ದಾರೆ. ಇದಕ್ಕೆ ಸರ್ಕಾರದ ಪರವಾನಿಗೆ ಇಲ್ಲ. ಸರ್ಕಾರದ ಪರವಾನಿಗೆ ಇಲ್ಲದೇ ಈ ರೀತಿಯ ಯೋಜನೆಗಳನ್ನು ಹಾಕುವುದಿದ್ದರೆ ಸರ್ಕಾರ ಏನಾದರೂ ನಿದ್ದೆ ಮಾಡುತ್ತಿದೆಯೇ ಎಂದು ತಿಳಿಬೇಕಾಗಿದೆ. ಅಥವಾ ಮಂಗಳೂರು ಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ಹಿಡಿತ ಅವರ ಮೇಲೆ ಇಲ್ಲವೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕುಂಭ ಸುಂದರರಾವ್ : ಮಂಗಳೂರು ನಗರಕ್ಕೆ ಕುಡಿಯುವ ನೀರು ಇಲ್ಲ ಅವರು ರಸ್ತೆ ಅಗಿದು ದೊಡ್ಡ ಕೊಳವೆಗಳ ಮೂಲಕ ನೀರು ತೆಗೆದುಕೊಂಡು ಹೋಗುತ್ತಿದ್ದಾರೆ.

ಅಧ್ಯಕ್ಷರು : ಸುಂದರರಾವ್‌ರವರೇ ತಾವೇ ನೇರವಾಗಿ ಮಾತನಾಡುವುದಕ್ಕೆ ಶುರುಮಾಡಿ ಬಿಟ್ಟರೆ ಹೇಗೆ? ಈ ಕಡೆ ತಿರುಗಿ ಮಾತನಾಡಬೇಕಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : 14 ಕೋಟಿ ರೂಪಾಯಿಗಳ ಸೆಸ್ ಕಟ್ಟುವುದಕ್ಕೆ ಹಣಕಾಸಿನ ತೊಂದರೆ ಇರುವಂತಹ ಸಮಯದಲ್ಲಿ ಆ ಹಣವನ್ನು ವಸೂಲಿನ ಮಾಡುವುದು ಬಿಟ್ಟಿರುವುದರಿಂದ ನಮಗೆ ಅನುಮಾನ ಏನು ಅಂದರೆ ಅವರು ಮಾತನಾಡುವ ರೀತಿಯನ್ನು ನೋಡಿದರೆ ಅದನ್ನು ಅವನಿಗೆ ರದ್ದು ಮಾಡುವಂತಹ ಒಂದು ಚಿಂತನೆಯನ್ನು ನಡೆಸುತ್ತಿದ್ದಾರೆ, ಏಕೆ ಈ ಕೆಲಸವನ್ನು ಮಾಡಿತ್ತಿದ್ದೀರಿ? ಇಷ್ಟು ದೊಡ್ಡ ಹಣವನ್ನು ಅವರಿಗೆ ರಿಲೀಫ್ ಕೊಡುವುದಕ್ಕೆ ಹೊರಟಿದ್ದೀರಲ್ಲ, ಇದಕ್ಕೆ ಏನಾದರೂ ಕಾರಣ ಇದೆಯೇ ಎಂದು ಅಂತ ನಾನು ಕೇಳುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅಂತಹ ಚಿಂತನೆ ಇಲ್ಲ, ಅಂಥಾದ್ದು ಒಂದು ಪ್ರೊಪೋಜಲ್ ಬಂದಿದೆ ಆದರೆ ನಾವು ಅಂತಹ ರಿಯಾಯಿತಿ ಏನೂ ಕೊಡುವುದಿಲ್ಲ ಸರ್ಕಾರದ ಎದುರಿನಲ್ಲಿ ಅಂತಹ ಯಾವುದೇ ಪ್ರೊಪೋಜಲ್ ಇಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ ಅನೇಕ ಕೈಗಾರಿಕೆಗಳು ಈಗ ಮಂಗಳೂರು ಸುತ್ತಮುತ್ತ ಬರುತ್ತಿವೆ. ಮಂಗಳೂರಿನ ಪ್ರಾಧಿಕಾರದ ಸಮಸ್ಯೆಗಳು ಮಂಗಳೂರಿನ ಕಾರ್ಪೊರೇಷನ್ ಸಮಸ್ಯೆಗಳು ಆರ್ಥಿಕ ಅಡಚಣೆಯಿಂದ ಬಹಳಷ್ಟು ಸ್ಥಗಿತಗೊಂಡಿದೆ. ಈ ರೀತಿ ಇರುವಾಗ ಕೋಟ್ಯಾಂತರ ರೂಪಾಯಿಗಳು ದೊಡ್ಡ ದೊಡ್ಡ ಸಂಸ್ಥೆಗಳಿಂದ ಬರುವಂತಹ ಹಣವನ್ನು ವಸೂಲಿ ಮಾಡುವುದಕ್ಕೆ ಇನ್ನು ತಾಳಮೇಳ ಏಕೆ ಮಾಡುತ್ತೀರಿ ಎಂದು ನನಗೆ ಇನ್ನೂ ಅರ್ಥವಾಗುವುದಿಲ್ಲ. ಒಂದು ನಿರ್ದಿಷ್ಟವಾದ ಸಮಯವಕಾಶ ಕೊಟ್ಟು ಅವರಿಂದ ವಸೂಲಿ ಮಾಡಲು ಆಗದಿದ್ದರೆ ಇನ್ನು ಸಣ್ಣ ಸಣ್ಣ ಸ್ಕ್ವಾಲ್ಸ್‌ಕೇಲ್ ಇಂಡಸ್ಟ್ರೀಗಳಿಂದ ಇಂತಹ ಸೆಸ್‌ಗಳು ಏನಾದರೂ ಬರದಿದ್ದರೆ ಮುಚ್ಚಿ ಹಾಕುತ್ತೀರಿ. ತಕ್ಷಣ ಆಕ್ಷನ್ ತೆಗೆದುಕೊಳ್ಳುತ್ತೀರಿ. ಆದರೆ ಇಂತಹ ಎಂ.ಆರ್.ಪಿ.ಎಲ್. ಸಂಸ್ಥೆಗಳಿಂದ 13-14 ಕೋಟಿ ಹಣ ವಸೂಲಿ ಮಾಡಲು ಆಗುತ್ತಿಲ್ಲ ಎಂದು ಆದರೆ ಇದರಷ್ಟು ಹೊಣೆಗೇಡಿತನದ ವ್ಯವಹಾರ ಬೇರೊಂದು ಇಲ್ಲ. ಆದ್ದರಿಂದ ನಿರ್ದಿಷ್ಟವಾದ ದಿನಾಂಕ, ನಿರ್ದಿಷ್ಟವಾದ ಸಮಯದಲ್ಲಿ ವಸೂಲಿನ ಮಾಡುತ್ತೀರಿ ಎನ್ನುವ ಸ್ಪಷ್ಟ ಉತ್ತರ ಕೊಡಬೇಕಾಗಿದೆ.

ಶ್ರೀ ವೈಜನಾಥ ಪಾಟೀಲ್ : ಸರ್ಕಾರ ಯಾರಿಗೂ ಹಣ ಬಿಡಬೇಕೆನ್ನುವ ಉದ್ದೇಶ ಇಲ್ಲ, ಆದಷ್ಟು ಬೇಗ ಆ ಕಂಪೆನಿ ಮತಿಯಿಂದ ಹಣ ವಸೂಲಿ ಮಾಡಿ ಮಂಗಳೂರು ಪಟ್ಟಣಕ್ಕೆ ಏನೇನು ಸೌಲತ್ತುಗಳು ಕೊಡಬೇಕೋ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೇ, ಕಡಿತಗಳು ಕಳೆದ ಒಂದು ವರ್ಷದಿಂದ ಪರಿಶೀಲನೆಯಲ್ಲಿವೆ ಎಂದು ಮಾನ್ಯ ಮಂತ್ರಿಗಳು ಕೂಡ ಒಪ್ಪಿಕೊಂಡಿದ್ದಾರೆ. ಕಳೆದ ಒಂದು ವರ್ಷದಿಂದ ಕಡತಗಳು ಯಾವ ಹಂತದಲ್ಲಿವೆ. ಆ ಬಗ್ಗೆ ಏನಾದರೂ ಮಾತುಕತೆಗಳು ಆಗಿವೆಯೇ? ಮಾತುಕತೆಗಳು ಏನಾದರೂ ಆಗಿದ್ದರೆ ಅವು ಯಾವ ಹಂತದಲ್ಲಿ ಇವೆ. ಇದರ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕಾಗುತ್ತದೆ. ಮಂಗಳೂರು ನಗರಕ್ಕೆ ಸರ್ಕಾರ ಕೊಡಬೇಕಾದ 2 ಕೋಟಿ 80 ಲಕ್ಷದ ಹಣ ಇನ್ನು ಕೊಟ್ಟಿಲ್ಲ ಈ ಹಣವನ್ನು ತಾವು ವಸೂಲಿ ಮಾಡಿದರೆ ತಕ್ಷಣ ಅಲ್ಲಿಗೆ ಹಣ ಕೊಡಲು ಸಾಧ್ಯವಾಗುತ್ತದೆ. ಸರ್ಕಾರ ಈ ಹಣವನ್ನು ಅವರಿಗೆ ಮನ್ನಾ ಮಾಡುವಂತಾದ್ದು ಅಥವಾ ವಸೂಲಿ ಮಾಡುವಂಥಾದ್ದು ಯಾವ ಹಂತದಲ್ಲಿದೆ ಎಂದು ನಾನು ಕೇಳಬಯಸುತ್ತೇನೆ.

ಅಧ್ಯಕ್ಷರು : ಆ ಆಲೋಚನೆ ಇಲ್ಲ ಎಂದು ಅವರು ಹೇಳಿಬಿಟ್ಟಿದ್ದಾರೆ ಬಿಡಿ. ನಾನು ಮುಂದಿನ ಪ್ರಶ್ನೆಗೆ ಹೋಗುತ್ತಿದ್ದೇನೆ.